ಕೆಲ ಸಮಯದಲ್ಲಿಯೇ ಮತ್ತೆ ಬಂಗಾಳಕ್ಕೆ ಹೋಗಿಬಂದ ಬಾಬಾ ಹಿಂದಿನಂತೆ ಏಕಾದಶಿಯಂದು ಮಾತ್ರ ದರ್ಶನವನ್ನು ನೀಡಲು ಪ್ರಾರಂಭಿಸಿದರು. ಸುಮಾರು ೧೮೮೮ರಲ್ಲಿ ದೀರ್ಘ ಕಾಲ ಅವರು ಹೊರಗೆ ಬರಲಿಲ್ಲ. ಹಳ್ಳಿಗರು, ಇವರು ದೇಹವನ್ನು ತ್ಯಜಿಸಿರಬಹುದೆಂದು ಶಂಕಿಸಿದರು. ಸುಮಾರು ಐದು ವರ್ಷಗಳ ನಂತರ ಗುಹೆಯಿಂದ ಗಂಟೆಯ ಶಬ್ದವನ್ನು ಕೇಳಿ, ಬಾಬಾ ಇನ್ನೂ ಜೀವಂತವಾಗಿದ್ದಾರೆ ಎಂದು ತಿಳಿದು ಆನಂದಿಸಿದರು. ಪವಾಹಾರಿ ಬಾಬಾ ಹೊರಗೆ ಬಂದು ಹಳ್ಳಿಗರಿಗೆ ದರ್ಶನವಿತ್ತರು. ಆಗ ಹಳ್ಳಿಗರ ಆನಂದಕ್ಕೆ ಎಲ್ಲೆಯೇ ಇರಲಿಲ್ಲ. ಆನಂದದ ಸಂಭ್ರಮದಿಂದ ಸಾಧುಗಳಿಗೆ, ಬಡವರಿಗೆ ಅನ್ನಸಂತರ್ಪಣೆಯು ವಿಜೃಂಭಣೆಯಿಂದ ನಡೆಯಿತು.

ಮತ್ತೊಮ್ಮೆ ಆಶ್ರಮದಲ್ಲಿ ಕಾರ್ಯಚಟುವಟಿಕೆಗಳು ಆರಂಭ ವಾದುವು. ಪ್ರತಿದಿನವೂ ಬಾಬಾ ಧಾರ್ಮಿಕ ಗ್ರಂಥಗಳ ಕುರಿತು ಉಪನ್ಯಾಸಗಳನ್ನು ಮಾಡುತ್ತಿದ್ದರು. ಒಮ್ಮೆ ಆಶ್ರಮದ ಸಮೀಪದ ಗಂಗಾತೀರದ ಬಳಿ ಇದ್ದ ಸಾಧಕನೊಬ್ಬನು ರಹಸ್ಯವಾಗಿ ಯೋಗಸಾಧನೆಗಳನ್ನು ಮಾಡುತ್ತಿದ್ದನು. ಇದನ್ನು ತಿಳಿಯದ ಪವಾಹಾರಿ ಬಾಬಾ ನಿತ್ಯದಂತೆ ಮುಂಜಾನೆಯ ಮಸುಕಿನಲ್ಲಿ ಸ್ನಾನಕ್ಕೆಂದು ಅಲ್ಲಿಗೆ ಹೋದರು. ದಾರಿಯ ಮಧ್ಯದಲ್ಲಿ ಯೋಗಸಾಧನೆ ಯನ್ನು ಮಾಡುತ್ತಿದ್ದ ಸಾಧಕನನ್ನು ಅನಿರೀಕ್ಷಿತವಾಗಿ ನೋಡಿಬಿಟ್ಟರು. ಆಶ್ಚರ್ಯವೆಂದರೆ ಇದರಿಂದ ಅವರಿಗೆ ಅನಾರೋಗ್ಯವುಂಟಾಯಿತು. ಕೆಲವು ಸಮಯ ಅವರ ಸಾಧನೆಯನ್ನು ನಿಲ್ಲಿಸಬೇಕಾಯಿತು. ಈ ಘಟನೆಯಿಂದ ಬಾಬಾ ತಮ್ಮ ಆಶ್ರಮದ ಬಳಿಯೇ ಸ್ನಾನಕ್ಕೆಂದು ಬಾವಿಯನ್ನು ತೋಡಲು ನಿಶ್ಚಯಿಸಿದರು. ಸ್ವತಃ ತಾವೇ ಆ ಬಾವಿ ಯನ್ನು ತೋಡಿದರು. ಇಂದಿಗೂ ಅದೇ ಬಾವಿಯ ನೀರನ್ನು ಆಶ್ರಮ ದವರು ಉಪಯೋಗಿಸುತ್ತಾರೆ.

ಏತನ್ಮಧ್ಯೆ ಬಾಬಾ ಮಹಾಯಾಗವೊಂದನ್ನು ಮಾಡಲು ನಿಶ್ಚಯಿ ಸಿದರು. ಅದು ಪೂರ್ಣಗೊಳ್ಳಲು ಸುಮಾರು ಒಂದು ತಿಂಗಳ ಕಾಲ ಬೇಕಾಯಿತು. ಒಂದು ದೊಡ್ಡ ಗ್ರಾಮವೆಂಬಂತೆ ಅನೇಕ ಕುಟೀರ, ಬಿಡಾರಗಳನ್ನು ನಿರ್ಮಿಸಿದರು. ನೂರಾರು ಸಾಧು ಸಂತರು, ಪಂಡಿತರು, ಆಸ್ತಿಕರು ದೇಶದ ಮೂಲೆಮೂಲೆಗಳಿಂದ ಬಂದು ಈ ಮಹಾಯಾಗದಲ್ಲಿ ಪಾಲ್ಗೊಂಡರು. ಭಗವನ್ನಾಮ ಸಂಕೀರ್ತನೆಯು ಭಾಗೀರಥಿಯಂತೆ ಹರಿದು, ಭಕ್ತರ ಹೃನ್ಮನ ಗಳನ್ನು ಪಾವನಗೊಳಿಸಿತು, ಎಲ್ಲರಿಗೂ ಶಾಂತಿಯನ್ನು ನೀಡಿತು. ಪಂಡಿತರು ಅನೇಕ ವಿದ್ವದ್‌ಗೋಷ್ಠಿಗಳನ್ನು ಆಯೋಜಿಸಿದರು. ಮಹಾಪಂಡಿತರೂ, ಮೇಧಾವಿಗಳೂ ಆಗಿದ್ದ ಪವಾಹಾರಿ ಬಾಬಾ ಅವರನ್ನು ಈ ಗೋಷ್ಠಿಗಳಲ್ಲಿ ಪಾಲ್ಗೊಳ್ಳಲು ಪ್ರಾರ್ಥಿಸಿಕೊಂಡಾಗ, "ಈ ಸೇವಕನಿಗೆ ಏನು ಗೊತ್ತು?" ಎಂಬ ವಿನಯಪೂರ್ವಕವಾದ ಉತ್ತರವನ್ನಿತ್ತರು. 'ವಿದ್ಯೆ ವಿನಯವನ್ನು ಕೊಡುತ್ತದೆ' , 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಪಂಡಿತರು ಬಾಬಾ ಅವರಿಗೆ ಮನಸ್ಸಿನಲ್ಲೇ ನಮಿಸಿ ದರು. ಮಹಾಯಾಗವು ಪೂರ್ಣವಾದ ದಿನದಂದು, ಬಾಬಾ ಸ್ವತಃ ಎಲ್ಲಾ ಸಾಧುಗಳ ಪಾದಪೂಜೆಯನ್ನು ಮಾಡಿ, ಅವರಿಗೆಲ್ಲ ಉಡು ಗೊರೆಗಳನ್ನು ನೀಡಿದರು; ಎಲ್ಲರಿಗೂ ರಸದೌತಣವನ್ನು ನೀಡಿ ಯಾಗವನ್ನು ಪೂರ್ಣಗೊಳಿಸಿದರು.

ಒಮ್ಮೆ ಬಾಬಾ, ಒಂದು ವಿಶೇಷ ಔತಣವನ್ನು ಆಯೋಜಿಸಿದರು. ಇದರಲ್ಲಿ ಪಾಲ್ಗೊಳ್ಳಲು ಹಲವಾರು ಸಂನ್ಯಾಸಿಗಳು, ಭಕ್ತರು ಬರುವ ನಿರೀಕ್ಷೆಯಿತ್ತು. ಕಾರ್ಯಕ್ರಮಕ್ಕೆ ಇನ್ನು ಕೆಲವೇ ದಿನಗಳಿದ್ದವು. ಪವಾ ಹಾರಿ ಬಾಬಾ ಬಾಗಿಲಿನ ಹಿಂದೆ ನಿಂತು ಮಾರ್ಗದರ್ಶನವನ್ನು ನೀಡುತ್ತಿದ್ದರು. ಅದು ಬೇಸಿಗೆಯ ಸಮಯ. ಬಾಬಾ ಅವರ ಅಣ್ಣ ಗಂಗಾ ತಿವಾರಿ, ಬಾಬಾ ಬಳಿ ನೀರಿನ ತೊಂದರೆಯನ್ನು ತೋಡಿಕೊಂಡರು. ಔತಣಕ್ಕೆ ಹಲವಾರು ಜನ ಸೇರುತ್ತಾರೆ, ಅವರಿಗೆ ಕುಡಿಯಲು, ಅಡುಗೆ ಮಾಡಲು, ಸ್ನಾನಕ್ಕೆ ಹೆಚ್ಚು ನೀರು ಬೇಕು; ಆ ಕಾರಣ ಕೆಲವು ಬಾವಿಗಳನ್ನು ಅಗೆಯುವುದು ಸೂಕ್ತವೆಂದರು. ಬೇಸಿಗೆಯ ಸಮಯವಾದ ಕಾರಣ ಆ ಸಮಯದಲ್ಲಿ ಗಂಗೆಯು ತುಂಬಾ ಸಣ್ಣದಾಗಿ ಹರಿಯುತ್ತದೆ. ಅಲ್ಲದೆ ಈಗ ಅದು ದೂರ ವಿರುವುದರಿಂದ ಬೇಸಿಗೆಯಲ್ಲಿ ಬಿಸಿ ಮರಳಿನ ಮೇಲೆ ನಡೆದು ಅಷ್ಟೊಂದು ನೀರನ್ನು ತರಲು ದುಸ್ಸಾಧ್ಯ. ಈ ಕಷ್ಟವನ್ನು ಗಂಗಾ ತಿವಾರಿ ಬಾಬಾ ಅವರಿಗೆ ನಿವೇದಿಸಿಕೊಂಡರು. ಇದಕ್ಕೆ ಬಾಬಾ, "ನೀವು ಗಂಗೆಯನ್ನು ಔತಣಕ್ಕೆ ಆಹ್ವಾನಿಸಿದ್ದೀರಾ?" ಎಂದು ಪ್ರಶ್ನಿಸಿದರು. ಈ ಪ್ರಶ್ನೆಯಿಂದ ಅಚ್ಚರಿಗೊಂಡ ಗಂಗಾ ತಿವಾರಿ ಇಲ್ಲವೆನ್ನಲು, "ಗಂಗಾಮಾತೆಯನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ" ಎಂದರು ಬಾಬಾ. ಇದನ್ನು ಕೇಳಿದ ಹಲವರು ಬಾಬಾ ಅವರಿಗೇನಾ ಯಿತು ಎಂದು ನಕ್ಕರು. ಆದರೆ ಗಂಗಾ ತಿವಾರಿಗೆ ಬಾಬಾಜಿ ಮೇಲೆ ಅತ್ಯಂತ ಶ್ರದ್ಧೆ, ಗೌರವ. ಬಾಬಾ ಅವರ ಆದೇಶದ ಮೇರೆಗೆ ಗಂಗಾ ತಿವಾರಿಯು ಯಥೇಚ್ಛ ಹೂವು, ಹಣ್ಣು, ಸಿಹಿ ತಿಂಡಿ, ಒಂದು ಸೀರೆ ಮತ್ತು ಕೈಯಲ್ಲಿ ಬರೆದಿರುವ ಆಹ್ವಾನದ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ, ಗಂಗಾಮಾತೆಯನ್ನು ಪೂಜಿಸಿ ಅರ್ಪಿಸಿ ದರು. ಇನ್ನು ಮೂರು ದಿವಸದಲ್ಲಿ ಕಾರ್ಯಕ್ರಮ. ಗಂಗಾ ತಿವಾರಿ ನೀರಿನ ಸಮಸ್ಯೆಯಿಂದ ಕಳವಳಗೊಂಡಿದ್ದರು. ಆದರೆ ಬಾಬಾ, ಅವರಿಗೆ ನೆಮ್ಮದಿಯಿಂದಿರಲು ತಿಳಿಸಿದರು. ಆಶ್ರಮದ ಮುಂದೆ ಮಳೆಗಾಲದಲ್ಲಿ ನೀರು ಹೆಚ್ಚಾಗುತ್ತದೆಂದು ಒಂದು ಕಾಲುವೆಯನ್ನು ತೋಡಿಸಿದ್ದರು. ಅಲ್ಲಿಂದ ಸುಮಾರು ಅರ್ಧ ಮೈಲಿ ದೂರದಲ್ಲಿ ಭಾಗೀರಥಿಯು ಮಂದವಾಗಿ ಹರಿಯುತ್ತಿದ್ದಾಳೆ. ಬಾಬಾ ಅವರ ಪವಾಡವೋ ಅಥವಾ ಪ್ರಾರ್ಥನೆಯ ಶಕ್ತಿಯೋ, ಆ ಸುಡುಬೇಸಿಗೆಯಲ್ಲಿ ಗಂಗೆಯು ಪಶ್ಚಿಮದತ್ತ ಸ್ವಲ್ಪ ಸ್ವಲ್ಪವಾಗಿ ಹರಿದು ಕಾಲುವೆಯನ್ನು ಸೇರಿದಳು. ಕಾರ್ಯಕ್ರಮದ ದಿನದಂದು ಕಾಲುವೆ ಗಂಗಾ ನದಿಯ ನೀರಿನಿಂದ ಭರ್ತಿಯಾಗಿತ್ತು. ಇದನ್ನು ಕಂಡ ಜನರು ತಮ್ಮನ್ನು ತಾವೇ ನಂಬದಾದರು.

**'ಯೋಗಃ ಕರ್ಮಸು ಕೌಶಲಂ'** ಎಂಬಂತೆ ಬಾಬಾ ಎಲ್ಲ ಕೆಲಸಗಳನ್ನೂ ಬಹಳ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ದೇವರ ಪೂಜೆ, ಕಸಗುಡಿಸುವುದು, ಪಾತ್ರೆ ತೊಳೆಯುವುದು – ಈ ಎಲ್ಲ ಕೆಲಸಗಳನ್ನೂ ಏಕಾಗ್ರತೆಯಿಂದ ಮಾಡುತ್ತಿದ್ದರು; "ಜೀವನದಲ್ಲಿ ಗುರಿ ಎಷ್ಟು ಮುಖ್ಯವೋ, ಮಾರ್ಗವೂ ಅಷ್ಟೇ ಮುಖ್ಯ" ಎನ್ನುತ್ತಿದ್ದರು. ಆದ್ದರಿಂದ ಎಲ್ಲ ಕಾರ್ಯಗಳನ್ನೂ ಪೂರ್ಣ ಮನಸ್ಸಿನಿಂದ ನೆರವೇರಿಸುತ್ತಿದ್ದರು. ಹೀಗಾಗಿ ಅವರು ಎಲ್ಲ ಕಾರ್ಯಗಳಲ್ಲಿಯೂ ಪರಿಣತಿಯನ್ನು ಹೊಂದಿದ್ದರು. ಕಲ್ಲಿನ ಕೆಲಸ, ಮರದ ಕೆಲಸ, ಗಾರೆಯ ಕೆಲಸಗಳಲ್ಲಿ ಇವರ ಕುಶಲತೆಯನ್ನು ಕಂಡು ಜನರೆಲ್ಲರೂ ಬೆರಗಾಗುತ್ತಿದ್ದರು. ಎಷ್ಟೋ ಬಾರಿ ಮಣ್ಣಿನಲ್ಲಿ ಮಾದರಿಗಳನ್ನು